# ಕಣ್ಣ ಮುಂದೆಯೆ ನಂದಿಹೋದ ಜೀವ ಪ್ರೀತಿಯ ಹಣತೆ

ಕರೀನಾಳ ವಿವಾಹ ನೀನಾಳ ಸಂತೋಷಕ್ಕಾಗಿ ಅವಸರದಲ್ಲಿ ಮಾಡಲಾಗುತ್ತಿದೆ ಎಂಬ ವಿಷಯ ಎಲ್ಲರಿಗೂ ತಿಳಿದಿತ್ತು. ಅದಕ್ಕಾಗಿ ವಾತಾವರಣದಲ್ಲಿ ವೇದನೆಯೊಂದು ವ್ಯಾಪಿಸಿತ್ತು.

ಶೀಲಾ ದೇವಿಯವರಿಂದ ಹಿಡಿದು ಆಲಿವರ್‌ವರೆಗೆ ಎಲ್ಲರೂ ವೀಲ್ ಚೇರನ್ನು ಹಿಡಿದಿದ್ದರು. ಆಲಿವರ್ ನೀನಾಳನ್ನು ಅತ್ತ ಇತ್ತ ಕರೆದೊಯ್ಯುತ್ತಿದ್ದ. ಅವಳನ್ನು ಅತಿಥಿಗಳೊಂದಿಗೆ ಭೇಟಿ ಮಾಡಿಸುತ್ತಿದ್ದ, ವಿವಾಹದ ಪದ್ಧತಿಗಳನ್ನು ಸಹ ನಿರ್ವಹಿಸುತ್ತಿದ್ದ. ನಾನು ದೂರದಿಂದಲೇ ಎಲ್ಲವನ್ನೂ ನೋಡುತ್ತಿದ್ದೆ.

ಈ ಜೀವನವೊಂದು ಒಗಟು. ನನಗೆ ತಿಳಿದಂತೆ, ನಾನು ಕರೀನಾ ಮತ್ತು ಜೊಹಾನಾಳನ್ನು ಒಂದು ವಿಧದಲ್ಲಿ ನನ್ನ ಮಕ್ಕಳಾದ ಲೂಸಿ ಮತ್ತು ಗ್ರೇಸಿಯಂತೆ ಸಾಕಿದ್ದೇನೆ. ಅವರ ಶಾಲೆಗಳಲ್ಲಿ ನಡೆಯುತ್ತಿದ್ದ ಪೇರೆಂಟ್ಸ್ ಮೀಟಿಂಗ್ ಮತ್ತು ಇನ್ನಿತರ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೆ, ಅವರ ಹುಟ್ಟುಹಬ್ಬಗಳನ್ನು ಆಚರಿಸುತ್ತಿದ್ದೆ. ನೀನಾ ನನ್ನ ಜೀವನದಲ್ಲಿ ಪ್ರವೇಶಿಸಿದಾಗ ಕರೀನಾಗೆ ಹನ್ನೊಂದು ವರ್ಷ ಮತ್ತು ಜೊಹಾನಾಳಿಗೆ ಒಂಬತ್ತು ವರ್ಷವಾಗಿತ್ತು. ಇಬ್ಬರು ನನ್ನೊಂದಿಗಿರುತ್ತಲೇ ದೊಡ್ಡವರಾದರು. ಅದೆಷ್ಟೋ ವಿಷಯಗಳಲ್ಲಿ ನಾನು ಅವರಿಗೆ ಸಹಕರಿಸಿದೆ.

ನೀನಾಳೊಂದಿಗಿನ ವಿಚ್ಛೇದನದ ನಂತರವೂ ನಾನು ಕರೀನಾ ಮತ್ತು ಜೊಹಾನಾಳ ಸಂಪರ್ಕದಲ್ಲಿರಲು ಬಯಸುತ್ತಿದ್ದೆ. ನನ್ನ ಮತ್ತು ನೀನಾಳ ನಡುವಿನ ಮನಸ್ತಾಪದಲ್ಲಿ ಈ ಮಕ್ಕಳ ದೋಷವಿಲ್ಲ, ಇಬ್ಬರೂ ನನಗೆ ಲೂಸಿ ಗ್ರೇಸಿಯಂತೆ, ನಾನು ಅವರೊಂದಿಗೆ ನನ್ನ ಸಂಬಂಧವನ್ನು ಮುರಿದುಕೊಳ್ಳುವುದಿಲ್ಲ ಎಂದು ಯೋಚಿಸಿದೆ. ನಾನೊಮ್ಮೆ ಇಬ್ಬರನ್ನು ಮೆಕ್ಸಿಕನ್ ರೆಸ್ಟೋರೆಂಟಿನಲ್ಲಿ ಡಿನ್ನರ್‌ಗೆ ಆಹ್ವಾನಿಸಲು ಯೋಚಿಸಿದೆ. ಆದರೆ ನಾನು ಅವರಿಗೆ ಫೋನ್ ಮಾಡಿದಾಗ ಅವರು ಹೇಳಿದರು, 'ನನಗೆ ನಿಮ್ಮ ಬಗ್ಗೆ ತುಂಬಾ ಸಹಾನುಭೂತಿಯಿದೆ, ನಾವು ನಿಮ್ಮನ್ನು ಇಷ್ಟಪಡುತ್ತೇವೆ, ಆದರೆ ನಾವು ನಮ್ಮ ತಾಯಿಯೊಂದಿಗೆ ಮನಸ್ತಾಪ ಮಾಡಿಕೊಳ್ಳಲಾರೆವು. ನಾವು ನಿಮ್ಮೊಂದಿಗೆ ಸಂಬಂಧವನ್ನಿಟ್ಟುಕೊಳ್ಳುವುದು ನೀನಾಳಿಗೆ ಇಷ್ಟವಿಲ್ಲ. ಅದಕ್ಕೇ ನಾವು ನಿಮ್ಮ ಸಂಪರ್ಕದಲ್ಲಿರಲು ಸಾಧ್ಯವಿಲ್ಲ. ನೀವು ನಮಗೆ ಫೋನ್ ಮಾಡಬೇಡಿ.'

ನಾನು ಭಾವುಕನಾಗಿ ಹೇಳಿದೆ, 'ನೀವು ಚಿಕ್ಕವರಾಗಿದ್ದಾಗ ನಾನು ನಿಮ್ಮೊಂದಿಗಿದ್ದೆ.'

ಇಬ್ಬರೂ ರೇಗುತ್ತಾ ಹೇಳಿದರು, 'ನೀವು ನಮಗಾಗಿ ಏನೂ ಮಾಡಲಿಲ್ಲ.'

ಇಂದು ನಾನು ನೋವಿನಿಂದ ನಗುತ್ತೇನೆ. ಜೀವನ ಎಂದರೇನು? ಕಾಲ ಎಂದರೇನು? ಕರೀನಾ ಮತ್ತು ಜೊಹಾನಾ ನನ್ನೊಂದಿಗೆ ಮಾತನಾಡುವುದನ್ನು ನಿಲ್ಲಿಸಿದ್ದರು, ನನ್ನನ್ನು ಭೇಟಿಯಾಗಲು ಒಪ್ಪುತ್ತಿರಲಿಲ್ಲ. ಆದರೆ ನೀನಾಳ ಆರೋಗ್ಯ ಹದಗೆಟ್ಟ ನಂತರ ನಾನು ಇದ್ದಕ್ಕಿದ್ದಂತೆ ಅವರ ಸಮೀಪದ ವ್ಯಕ್ತಿಯಾದೆ. ನೀನಾಳ ಆರೋಗ್ಯ ಹದಗೆಟ್ಟಾಗ, ಇಬ್ಬರೂ ಗಾಬರಿಯಿಂದ ನನಗೆ ಫೋನ್ ಮಾಡುತ್ತಿದ್ದರು. ತಮ್ಮ ತಾಯಿಯ ಬಗ್ಗೆ ಹೆಚ್ಚು ಸಂವೇದನೆಯನ್ನು ಹೊಂದಿರುವವರು ಯಾರು, ತಮ್ಮ ತಾಯಿಯ ಕಷ್ಟ ಮತ್ತು ದುಃಖದಲ್ಲಿ ಯಾರು ಲಭ್ಯವಾಗುತ್ತಾರೆ ಎಂಬುದು ಅವರಿಗೆ ತಿಳಿದಿತ್ತು. ಜೀವನದ ಸಂತೋಷ ನಮಗೆ, ಕಾಲ ಎಷ್ಟು ಬಳಕುತ್ತದೆ, ಮನುಷ್ಯನ ಭಾವನೆಗಳು

